ಶ್ರೀ ಆರ್. ಎಲ್. ಜಾಲಪ್ಪ --ಇದಕ್ಕೆ ಹಣವನ್ನು ಕುಂದಗೋಳ ಎ.ಪಿ.ಎಂ.ಸಿ. ಅವರು ಕೊಟ್ಟಿದ್ದಾರೆ. ಆದ್ದರಿಂದ ಅವರು ಹರಾಜಿನ ಮೂಲಕ ಮಾರಾಟ ಮಾಡಲು ಸರ್ಕಾರ ಅನುಮತಿ ಕೇಳಿದ್ದಾರೆ.

[ಗೊಂದಲ]

ಅಧ್ಯಕ್ಷರು --ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಈಗಾಗಲೇ 15 ನಿಮಿಷಗಳಿಗೂ ಹೆಚ್ಚು ಕಾಲ ತಾವುಗಳು ಉಪ ಪ್ರಶ್ನೆಗಳನ್ನು ಕೇಳಲು ತೆಗೆದುಕೊಂಡಿರುವುದರಿಂದ ಇನ್ನು ಯಾರಿಗೂ ಉಪಪ್ರಶ್ನೆ ಕೇಳಲು ಅವಕಾಶ ಕೊಡುವುದಿಲ್ಲ. ಅವರು ಇನ್ನೂ ಆ ಸಿಮೆಂಟನ್ನು ಮಾರಾಟ ಮಾಡಿಲ್ಲ ಅವರೂ ಅನುಮತಿ ಕೊಟ್ಟಿದ್ದಾರೆಂದು ತಾವು ತಿಳಿದು ಕೊಂಡಿದ್ದೀರಿ. ಆದರೆ ಅದು ಸರಿಯಲ್ಲ, ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಈಗ ಮುಂದಿನ ಪ್ರಶ್ನೆಗೆ ಹೋಗೋಣ

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.--ನಾವು ಯಾರಿಗೆ ಮೋಸ ಮಾಡಿದ್ದೇವೆಂದು ಮಾನ್ಯ ನಾಯಕ್ ಅವರು ಆ ರೀತಿ ಸಿಕ್ಕಾಪಟ್ಟೆ ಮಾತನಾಡುತ್ತಿದ್ದಾರೋ ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು --ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ --ಮಾನ್ಯ ಮಂತ್ರಿಗಳು ಸಹಾ ಮೆಂಬರ್ ತರಹವೇ ಮಾತನಾಡುತ್ತಾರೆ.

ಸಹಕಾರಿ ಗೃಹ ನಿರ್ಮಾಣ ಸಂಘದವರು ನಿವೇಶನಗಳನ್ನು ನೋಂದಾಯಿಸಿಕೊಳ್ಳುವ ಸಮಯದಲ್ಲಿ ಸ್ಟ್ಯಾಂಪು ಶುಲ್ಕದ ವಿನಾಯಿತಿ

326 (842) ಶ್ರೀಮತಿ ನಾಗರತ್ನಮ್ಮ (ಗುಂಡ್ಲುಪೇಟೆ).--ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸಹಕಾರ ಗೃಹ ನಿರ್ಮಾಣ ಸಂಘಗಳ ರಾಜ್ಯ ಸಮುದಾಯ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳು ವಾಗ್ದಾನ ಮಾಡಿದಂತೆ ಸಹಕಾರಿ ಗೃಹ ನಿರ್ಮಾಣ ಸಂಘಗಳು ನಿವೇಶನಗಳ ನೋಂದಣಿಗೆ ಇರುವ ಮುದ್ರಾಂಕ ಶುಲ್ಕದ ವಿನಾಯಿತಿ ಪೂರ್ವಸ್ಥಿತಿಗೆ ತರುವ ಸೂಚನೆ ಸರಕಾರದ ಮುಂದೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಪರಿಪಾಲನಾ ಆಶ್ವಾಸನೇ ಯಾವ ಹಂತದಲ್ಲಿ ಬಾಕಿ ಇದೆ ;

ಇ) ಈ ಬಗ್ಗೆ ಸದ್ಯದ ಅಧಿವೇಶನದಲ್ಲಿ ಯಾವುದಾದರೂ ತಿದ್ದುಪಡಿ ಅನುಮೋದನೆಗೆ ಸದನದ ಮುಂದೆ ತರುವ ಸೂಚನೆ ಇದೆಯೇ ?

ಶ್ರೀ ವಿ. ಎಸ್. ಪಾಟೀಲ್ (ಕಂದಾಯ ಮಂತ್ರಿಗಳು).--

ಅ) ನೋಂದಣಿಸುವ ಪತ್ರ ಸೊಸೈಟಿಯದಾಗಲಿ ಅಥವಾ ಅಧಿಕಾರಿಯದಾಗಲಿ ಅಥವಾ ಆಪತ್ಕ ಸದಸ್ಯನದಾಗಲಿ, ಆದರಲ್ಲಿ ತೋರಿಸಿರುವ ಕ್ರಮ್ಯತ್ತು ರೂ. 8,000 ಕ್ಕಿಂತ ಕಡಿಮೆ ಇಷ್ಟಲ್ಲಿ ಅದರ ಮೇಲೆ ಪೂರ್ಣವಾಗಿ ನೋಂದಣಿ ಶುಲ್ಕವನ್ನು ಮಾಫಿ ಮಾಡಲಾಗಿದೆ.

ಆ) (ಅ)ಕ್ಕೆ ಕೊಟ್ಟರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) (ಅ)ಕ್ಕೆ ಕೊಟ್ಟರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.--ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ಸಹಕಾರ ಗೃಹ ನಿರ್ಮಾಣ ಸಂಘಗಳ ರಾಜ್ಯ ಸಮುದಾಯ ಸಮ್ಮೇಳನದಲ್ಲಿ ಈ ಬಗ್ಗೆ ವಾಗ್ದಾನ ಮಾಡಿದ್ದರು. ಆ ವಾಗ್ದಾನದ ಪ್ರಕಾರ ಏನಾದರೂ ಈ ನೋಂದಣಿ ಶುಲ್ಕವನ್ನು ಮಾಫಿ ಮಾಡಲಾಗಿದೆಯೇ ? ಮಾಡಿದ್ದರೆ ಯಾವ ತಾರೀಖಿನಿಂದ ಮಾಡಲಾಗಿದೆ ? 4 ತಿಂಗಳಿಂದೀಚೆಗೆ ಏನಾದರು ಇದನ್ನು ಜಾರಿಗೆ ಕೊಡಲಾಗಿದೆಯೇ ಹೇಗೆ ? ಮುನಿಸಿಪಲ್ ಕಾರ್ಪೊರೇಷನ್, ಮುನಿಸಿಪಾಲಿಟಿ ಹೌಸಿಂಗ್ ಬೋರ್ಡ್ ಇವರೆಲ್ಲರಿಗೂ ಮಾರ್ಕೆಟ್ ವ್ಯಾಲ್ಯೂ ಮೇಲೆ ರಿಜಿಸ್ಟ್ರೇಷನ್ ಮಾಡಿಸಲು ಅನುಕೂಲ ವಿದೆ. ಆದರೆ ಈ ಸೊಸೈಟಿಗಳಿಗೆ ತಾವು ಏನಾದರೂ ರಿಯಾಯಿತಿ ಕೊಟ್ಟಿದ್ದೀರಾ ? ಕೆಲವು ಸಲ ಸಬ್‌ರಿಜಿಸ್ಟ್ರಾರ್ ಅವರು ಒಪ್ಪಿಕೊಂಡರೂ ಸಹ ಮುಂದೆ ವಿಶೇಷ ಜಿಲ್ಲಾಧಿಕಾರಿಯವರು ಕಡಿಮೆ ಬೆಲೆಗೆ ರಿಜಿಸ್ಟ್ರೇಷನ್ ಮಾಡಿಸಲಾಗಿದೆ ಎಂದು ತೊಂದರೆ ಕೊಡುತ್ತಾರೆ ಆದ್ದರಿಂದ ಇಷ್ಟಕ್ಕೇ ರಿಜಿಸ್ಟ್ರೇಷನ್ ಮಾಡಿಸಬಹುದೆಂದು ತಾವು ಡೈರೆಕ್ಷನ್

ಏನಾದರೂ ಕೊಟ್ಟಿದ್ದೀರಾ ? 1977ರ ಪ್ರಿವೆನ್‌ಷನ್ ಆಫ್ ಅಂಡರ್-ವ್ಯಾಲ್ಯುಯೇಷನ್ ಆರ್ಡರ್ ಪ್ರಕಾರ ತಾವೇನಾದರು ಹೆಚ್ಚುವರಿ ಸ್ಟ್ಯಾಂಪ್ ಶುಲ್ಕ ತೆಗೆದುಕೊಂಡಿದ್ದರೆ ಅದನ್ನು ಸಂಬಂಧಪಟ್ಟ ಸೊಸೈಟಿಗಳವರಿಗೆ ವಾಪಸ್ ಕೊಡಲು ವಿಚಾರಿಸಿ ಮಾಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.--ಮೊದಲು ಈ ಸವಲತ್ತು 1969 ರಿಂದ ಇತ್ತು, 1-4-82 ರಲ್ಲಿ ಈ ಸವಲತ್ತುಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು. ಆನಂತರ ಕರಿಪ್ಲೆಂಟ್ಸ್ ಬಂದನಂತರ 22-2-84 ರಲ್ಲಿ ಪುನ: ಈ ಸವಲತ್ತುಗಳನ್ನು ಕೊಡಲಾಗಿದೆ.

ರಾಯಚೂರು ನಗರದಲ್ಲಿ ಪ್ರಾದೇಶಿಕ ಕೊಳಚೆ ನಿರ್ಮೂಲನ ಮಂಡಲಿಯ ಸ್ಥಾಪನೆ

327 (834) ಶ್ರೀ ಸಂಗಮೇಶ್ವರ ಸರದಾರ (ರಾಯಚೂರು).--ಮಾನ್ಯ. ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಯಚೂರು ನಗರದಲ್ಲಿ ಪ್ರಾದೇಶಿಕ ಕೊಳಚೆ ನಿರ್ಮೂಲನ ಮಂಡಳಿಯನ್ನು ಪ್ರಾರಂಭಿಸಲು ಸರ್ಕಾರದವರು ಒಪ್ಪಿರುವುದು ನಿಜವೇ ;

ಆ) ಈ ಮಂಡಳಿಯನ್ನು ಪ್ರಾರಂಭಿಸದಿರುವುದರಿಂದಾಗಿ ರಾಯಚೂರು ನಗರದಲ್ಲಿ ದಿನೇ ದಿನೇ ಕೊಳಚೆ ಪ್ರದೇಶಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಮೇಲಿನ ಕಛೇರಿಯನ್ನು ಕೂಡಲೇ ಪ್ರಾರಂಭಿಸುವ ವಿಚಾರ ಸರ್ಕಾರದಲ್ಲಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು).--ಅ) ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ಶ್ರೀ ಎಂ. ಚಂದ್ರಶೇಖರ್.--ಮಾನ್ಯ ಅಧ್ಯಕ್ಷರೇ, ಆ ಪ್ರಶ್ನೆಯಲ್ಲಿ ರಾಯಚೂರು ನಗರದಲ್ಲಿ ಪ್ರಾದೇಶಿಕ ಕೊಳಚೆ ನಿರ್ಮೂಲನ ಮಂಡಲಿಯನ್ನು ಪ್ರಾರಂಭಿಸಲು ಸರಕಾರದವರು ಒಪ್ಪಿರುವುದು ನಿಜವೇ ಎಂದು ಕೇಳಿರುತ್ತಾರೆ, ಮತ್ತೆ ಇ ಪ್ರಶ್ನೆಯಲ್ಲಿ ಕಛೇರಿಯನ್ನು ಕೂಡಲೆ ಪ್ರಾರಂಭಿಸುವ ವಿಚಾರ ಸರಕಾರದವರಲ್ಲಿದೆಯೇ ಎಂದು ಕೇಳಿರುತ್ತಾರೆ, ಮಂಡಲಿಗೆ ಬದಲಾಗಿ ಕಚೇರಿಯೆಂದು ತಿದ್ದುಪಡಿಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಸಂಗಮೇಶ್ವರ ಸರದಾರ್.--ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ್ಳು ರಾಯಚೂರು ನಗರವನ್ನು ಕೊಳಚೆ ಪ್ರದೇಶಗಳಿಂದ ಕೂಡಿದಂಥ ನಗರವೆಂದು ಡಿಕ್ಲೇರ್ ಮಾಡಿರುತ್ತಾರೆ. ರಾಯಚೂರು ನಗರವು ಬೆಂಗಳೂರನ್ನು ಬಿಟ್ಟರೆ ಎರಡನೆಯ ಮಹಾ ನಗರವಾಗತಕ್ಕಂಥ ಪರಿಸ್ಥಿತಿಯಲ್ಲಿ ಇದೆ. ಆದ್ದರಿಂದ ಇಲ್ಲಿ ಒಂದು ರೀಜನಲ್ ಆಫೀಸನ್ನು ತೆಗೆಯಬೇಕೆಂದೂ ಕೂಡ ಒಪ್ಪಿಕೊಂಡಿರುತ್ತಾರೆ. ಹಾಗೆಯೇ ನನ್ನ ಮೂರನೆಯ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಈ ಪ್ರಶ್ನೆ ಉದ್ಭವಿಸುದಿಲ್ಲವೆಂದು ಹೇಳಿರುವುದರಿಂದ ನನಗೆ ಬಹಳ ವ್ಯಥೆಯಾಗುತ್ತಿದೆ. ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ಈ ರಾಯಚೂರು ಮಹಾ ನಗರದಲ್ಲಿ 28 ಕೊಳಚೆ ಪ್ರದೇಶಗಳು ಇರುವುದರಿಂದ, ಬೆಂಗಳೂರಿನ ನಗರದಂತೆ ಇಲ್ಲಿಯೂ ಕೂಡ ಒಂದು ರೀಜನಲ್ ಆಫೀಸನ್ನು ತೆಗೆಯಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ ?

ಶ್ರೀ ಎಂ. ಚಂದ್ರಶೇಖರ್.--ನಾನು ಪ್ರಶ್ನೆಯಲ್ಲಿ ಉತ್ತರವನ್ನು ಕೊಟ್ಟಿರುವಂತೆ ಇಲ್ಲಿ ಒಂದು ವಿಭಾಗೀಯ ಅಸಿಸ್ಟೆಂಟ್ ಇಂಜಿನೀಯರ್ ಆಫೀಸನ್ನು ಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೇನೆ. ಈ ನಗರಕ್ಕೆ ಕಛೇರಿಯ ಅವಶ್ಯಕತೆ ಇದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಿ, ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ.--ರಾಯಚೂರನ್ನು ಕೊಳಚೇ ಪ್ರದೇಶಗಳಿಂದ ಕೂಡಿದ ನಗರವೆಂದಾದರೂ ಘೋಷಣೆ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.--ಖಾಸಗಿಯಾಗಿ ಮಾತನಾಡುವಾಗ ಈ ವಿಚಾರ ಬಂದಿರುತ್ತದೆಂದು ಹೇಳಬೇಕಾಗಿದೆ.

ನಗರಾಭಿವೃದ್ಧಿ ಮಂಡಳಿಗೆ ಅನುದಾನ

328 (554) ಶ್ರೀ ಬಿ. ಹೆಚ್. ಯಂಕನಾಯಕ (ಹರಪನ ಹಳ್ಳಿ) ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?